ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ: ಸಿ3(7) ಪ್ರಾ..ಶಿ ವರ್ಗ: 01/2019–20 ದಿನಾಂಕ:–17/07/2019

ಜ್ಞಾಪನ

**ವಿಷಯ** : 2018–19ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ವರ್ಗಾವಣಾ ಗಣಕೀಕೃತ ಕೌನ್ಸಿಲಿಂಗ್ ಪ್ರಕ್ರಿಯೆಗಳನ್ನು ಮುಂದುವರೆಸುವ ಬಗ್ಗೆ ಮಾರ್ಗಸೂಚಿಗಳು – ವೇಳಾಪಟ್ಟಿಯಲ್ಲಿ ಅಲ್ಪ ಬದಲಾವಣೆಗಳ ಮಾಡಿರುವ ಬಗ್ಗೆ.

ಉಲ್ಲೇಖ : ಈ ಕಛೇರಿ **ಜ್ಞಾಪನ ಸಮ ಸಂಖ್ಯೆ ದಿನಾಂಕ** : 01.06.2019 ಹಾಗೂ ದಿನಾಂಕ 08/07/2019

--

ವಿಷಯದನ್ವಯ ವರ್ಗಾವಣೆ / ವಿನಾಯಿತಿ / ಆದ್ಯತಾ ಪ್ರಕರಣಗಳ ಕುರಿತಾಗಿ ಅವಧಿಯೊಳಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿಯವರು ಮತ್ತು ಆಯಾ ಕ್ಷೇತ್ರಶಿಕ್ಷಣಾಧಿಕಾರಿಯವರು ಸೂಕ್ತವಾಗಿ ಲೋಪವಿಲ್ಲದಂತೆ ವಿಲೇವಾರಿ ಮಾಡಲು ಆಡಳಿತ ಕಾರ್ಯವಿಧಾನವನ್ನು ಸೂಚಿಸಿ ದಿನಾಂಕ 17/07/2019ರಲ್ಲಿ ಜ್ಞಾಪನವನ್ನು ಹೊರಡಿಸಲಾಗಿರುತ್ತದೆ. ಈ ಜ್ಞಾಪನವನ್ನು ಹೊರಡಿಸುವ ಪೂರ್ವದಲ್ಲಿ ರಾಜ್ಯದ ಎಲ್ಲಾ ಉಪನಿರ್ದೇಶಕರುಗಳು ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳೊಂದಿಗೆ ವೀಡಿಯೋ ಕಾನ್ಫರೆನ್ಸ್ ಮುಖಾಂತರ ದಿನಾಂಕ 16/06/2019ರಂದು ಚರ್ಚಿಸಲಾಗಿದೆ. ದಿನಾಂಕ 17/07/2019ರ ಜ್ಞಾಪನದಲ್ಲಿ ಆಕ್ಷೇಪಣೆಗಳ ವಿಲೇವಾರಿಗೆ ಆಯಾ ಸಕ್ಷಮ ಪ್ರಾಧಿಕಾರಿಯವರು ಮತ್ತು ಕ್ಷೇತ್ರಶಿಕ್ಷಣಾಧಿಕಾರಿಯವರು ಕರಡು ಪಟ್ಟಿಗಳನ್ನು ಶಿಕ್ಷಕರ ಗಮನಕ್ಕೆ ಪ್ರಚುರಪಡಿಸಿ ಕರಡು ಪಟ್ಟಿಗಳ ಬಗ್ಗೆ ಅರ್ಜಿದಾರರ ಮನವಿಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಯವರು ಖುದ್ದು ಆಲಿಸಿ ಅಂತಿಮ ಪಟ್ಟಿಗಳನ್ನು ಪ್ರಕಟಿಸಲು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಉಲ್ಲೇಖಿತ ಮಾರ್ಗಸೂಚಿಯಲ್ಲಿನ ವೇಳಾಪಟ್ಟಿಯಲ್ಲಿ ಈ ಕೆಳಗಿನಂತೆ ಅಲ್ಪ ಬದಲಾವಣೆಗಳನ್ನು ಮಾಡಲಾಗಿದೆ. ಪರಿಷ್ಕೃತ ವೇಳಾಪಟ್ಟಿಯಂತೆ ಆಯಾ ಪ್ರಾಧಿಕಾರಿಗಳು ಅಗತ್ಯ ಕ್ರಮ ಕೈಗೊಂಡು ನಿಗದಿತ ದಿನಾಂಕಗಳಂದು ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಕೈಗೊಳ್ಳತಕ್ಕದ್ದು. ಉಳಿದ ಎಲ್ಲಾ ಮಾರ್ಗಸೂಚಿ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತವೆ. ಈ ಬಗ್ಗೆ ವ್ಯಾಪ್ತಿಯ ಎಲ್ಲಾ ಶಿಕ್ಷಕರ ಗಮನಕ್ಕೆ ವ್ಯಾಪಕವಾಗಿ ಪ್ರಚುರಪಡಿಸತಕ್ಕದ್ದು.

| ಕ್ರ.ಸಂ | ವಿವರ | ದಿನಾಂಕ | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|
| 13 ಎ | ಆದ್ಯತಾ ಹಾಗೂ ವಿನಾಯಿತಿ ಪ್ರಕರಣಗಳಲ್ಲಿ ಸ್ವೀಕೃತವಾದ ಎಲ್ಲಾ ಮನವಿಗಳನ್ನು ಸಕ್ಷಮ ಪ್ರಾಧಿಕಾರಿಯವರು ಆಯಾ ಕ್ಷೇತ್ರಶಿಕ್ಷಣಾಧಿಕಾರಿಯವರಿಗೆ ರವಾನಿಸುವುದು | 17/07/2019 ರೊಳಗೆ | 1) ಕ್ಷೇತ್ರಶಿಕ್ಷಣಾಧಿಕಾರಿಗಳು<br>2) ಜಿಲ್ಲಾ ಉಪನಿರ್ದೇಶಕರು [ಆಡಳಿತ] |
| 13 ಬಿ | ದಿನಾಂಕ 17/07/2019ರ ಜ್ಞಾಪನದಲ್ಲಿ ಸೂಚಿಸಿರುವ ಕಾರ್ಯವಿಧಾನವನ್ನು ಅನುಸರಿಸಿ ಸಕ್ಷಮ ಪ್ರಾಧಿಕಾರಿಯವರ ಕಛೇರಿಯಿಂದ ಪಡೆದ ಮತ್ತು ತಮ್ಮ ಕಛೇರಿಯಲ್ಲಿ ಸ್ವೀಕರಿಸಿರಬಹುದಾದ ಎಲ್ಲಾ ಆಕ್ಷೇಪಣಾ ಅರ್ಜಿಗಳನ್ನು ಪರಿಶೀಲಿಸಿ, | ದಿನಾಂಕ 20/07/2019 | 1) ಕ್ಷೇತ್ರಶಿಕ್ಷಣಾಧಿಕಾರಿಗಳು<br>2) ಜಿಲ್ಲಾ ಉಪನಿರ್ದೇಶಕರು [ಆಡಳಿತ] |

| | | | |
|---|---|---|---|
| | ದಾಖಲಾತಿಗಳ ಪರಿಶೀಲನೆಯ ಆಧಾರದ ಮೇಲೆ ಎಲ್ಲ ವಿಧದ ವರ್ಗಾವಣೆಗಳ ಸಂಬಂಧ 'ಕರಡು ಅಂಗೀಕೃತ ಪಟ್ಟಿ' ಮತ್ತು 'ಕರಡು ತಿರಸ್ಕೃತ ಪಟ್ಟಿ' ಗಳನ್ನು ಸಕ್ಷಮ ಪ್ರಾಧಿಕಾರಿಯವರು ಮತ್ತು ಆಯಾ ಕ್ಷೇತ್ರಶಿಕ್ಷಣಾಧಿಕಾರಿಯವರು ಪ್ರಕಟಿಸುವುದು | | |
| 13 ಸಿ | ಮೇಲಿನಂತೆ ಪ್ರಕಟಿಸಿರುವ ಕರಡು ಪಟ್ಟಿಗಳಿಗೆ ಅಂತಿಮವಾಗಿ ಆಕ್ಷೇಪಣೆ / ಅಗತ್ಯ ದಾಖಲೆಗಳನ್ನು ಸಲ್ಲಿಸಲು ಮತ್ತು ಸದರಿ ಆಕ್ಷೇಪಣೆಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು ಖುದ್ದಾಗಿ ಸ್ವೀಕರಿಸಿ ಆಲಿಸುವುದು . | ದಿನಾಂಕ 23/07/2019 | 1) ಕ್ಷೇತ್ರಶಿಕ್ಷಣಾಧಿಕಾರಿಗಳು<br>2) ಜಿಲ್ಲಾ ಉಪನಿರ್ದೇಶಕರು [ಆಡಳಿತ] |
| 13 ಡಿ | ವಿನಾಯಿತಿ / ಆದ್ಯತೆ ಕುರಿತಾದ ಆಕ್ಷೇಪಣೆಗಳನ್ನು ಸರಿಪಡಿಸಿ ಎಲ್ಲಾ ವಿಧವಾದ ವರ್ಗಾವಣೆಗಳಿಗೆ ಅಂತಿಮ ಪಟ್ಟಿಗಳನ್ನು ಪ್ರಕಟಿಸುವುದು | ದಿನಾಂಕ 24/07/2019 | 1) ಕ್ಷೇತ್ರಶಿಕ್ಷಣಾಧಿಕಾರಿಗಳು<br>2) ಜಿಲ್ಲಾ ಉಪನಿರ್ದೇಶಕರು [ಆಡಳಿತ] |
| 14 | ಘಟಕದೊಳಗಿನ ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳಿಗೆ ಆದ್ಯತಾ ಅನುಮೋದಿತ ಪಟ್ಟಿಗಳನ್ನು ಆನ್–ಲೈನ್ ನಲ್ಲಿ (ಉಪನಿರ್ದೇಶಕರಿಗೆ) ಸಲ್ಲಿಸುವುದು | ದಿನಾಂಕ 24/07/2019 | 1) ಕ್ಷೇತ್ರಶಿಕ್ಷಣಾಧಿಕಾರಿಗಳು<br>2) ಜಿಲ್ಲಾ ಉಪನಿರ್ದೇಶಕರು [ಆಡಳಿತ] |
| 15 | ಅಂತರ್ ಘಟಕ ವರ್ಗಾವಣೆ ಪ್ರಕರಣಗಳಲ್ಲಿ / ಪರಸ್ಪರ ವರ್ಗಾವಣೆ ಪ್ರಕರಣಗಳಲ್ಲಿ, ಉಪನಿರ್ದೇಶಕರು [ಆಡಳಿತ] ಇವರು ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ಪಡೆದ ಆದ್ಯತೆಯ ದೃಢೀಕೃತ ಪ್ರಮಾಣ ಪತ್ರಗಳನ್ನು, ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಿಗಳಿಗೆ, ಮುದ್ದಾಂ ಸಲ್ಲಿಸಬೇಕಾದ ದಿನಾಂಕ (ಆದ್ಯತಾ ಪಟ್ಟಿಯಲ್ಲಿರುವ ಶಿಕ್ಷಕರುಗಳ ಅರ್ಜಿಗಳನ್ನು ಮಾತ್ರ ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸುವುದು.) | ವಿಭಾಗೀಯ ಸಹನಿರ್ದೇಶಕರಿಗೆ (ವಿಭಾಗದ ಒಳಗಿನ ಅಂತರ್ ಜಿಲ್ಲಾ ವರ್ಗಾವಣೆ ಪ್ರಕರಣಗಳು ಮತ್ತು ಅಂತರ್ ವಿಭಾಗದ ವರ್ಗಾವಣೆ ಪ್ರಕರಣಗಳ ಪಟ್ಟಿಯ ಪ್ರತಿ) - 25/07/2019 | 1)ಜಿಲ್ಲಾ ಉಪನಿರ್ದೇಶಕರು [ಆಡಳಿತ]<br>2) ವಿಭಾಗೀಯ ಸಹನಿರ್ದೇಶಕರು , ಬೆಂಗಳೂರು/ ಮೈಸೂರು<br>3) ಅಪರ ಆಯುಕ್ತಾಲಯದ ಸಹನಿರ್ದೇಶಕರು, ಧಾರವಾಡ / ಗುಲ್ಬಾರ್ಗಾ |
| 16 | **<u>ಪರಸ್ಪರ ವರ್ಗಾವಣೆಗಳ (ಘಟಕದ ಒಳಗೆ / ಘಟಕದ ಹೊರಗೆ)</u> ಕೌನ್ಸಿಲಿಂಗ್‌ಗಾಗಿ <u>ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ</u>**<br>(ಸೂಚನಾ ಫಲಕ/ಇಲಾಖಾ ವೆಬ್‌ಸೈಟ್‌ನಲ್ಲಿ) | 26/07/2019 | 1) ಜಿಲ್ಲಾ ಉಪನಿರ್ದೇಶಕರು [ಆಡಳಿತ]<br>2) ವಿಭಾಗೀಯ ಸಹನಿರ್ದೇಶಕರು , ಬೆಂಗಳೂರು/ ಮೈಸೂರು<br>3) ಅಪರ ಆಯುಕ್ತಾಲಯದ ಸಹನಿರ್ದೇಶಕರು, ಧಾರವಾಡ / ಗುಲ್ಬಾರ್ಗಾ<br>4) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ |

| | | | |
|---|---|---|---|
| 17 | • ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ **ಘಟಕದ ಒಳಗೆ** ಪ್ರಾಥಮಿಕ ಶಾಲಾ ಶಿಕ್ಷಕರ **ಅಂತಿಮ ಆದ್ಯತಾ ಪಟ್ಟಿಯನ್ನು** ಕೌನ್ಸಿಲಿಂಗ್ ಕ್ರಮಗಳಿಗೆ ಆಯಾ ಸಕ್ಷಮ ಪ್ರಾಧಿಕಾರಿಯವರು **ಪ್ರಕಟಿಸುವುದು**<br>• ಖಾಲಿ ಹುದ್ದೆಗಳ ಅಂತಿಮ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರಿಯವರು ಪ್ರಕಟಿಸುವುದು<br>(ಸೂಚನಾ ಫಲಕ/ಇಲಾಖಾ ವೆಬ್‌ಸೈಟ್‌ನಲ್ಲಿ) | 27/07/2019 | ಉಪನಿರ್ದೇಶಕರು(ಆಡಳಿತ) |
| 18 | • ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ **(ಘಟಕದ ಹೊರಗೆ) ಅಂತಿಮ ಆದ್ಯತಾ ಪಟ್ಟಿ**ಯನ್ನು ಕೌನ್ಸಿಲಿಂಗ್ ಕ್ರಮಗಳಿಗೆ ಆಯಾ ಸಕ್ಷಮ ಪ್ರಾಧಿಕಾರಿಯವರು **ಪ್ರಕಟಿಸುವುದು** (ಸೂಚನಾ ಫಲಕ/ಇಲಾಖಾ ವೆಬ್‌ಸೈಟ್‌ನಲ್ಲಿ) | 27/07/2019 | 1. ಆಯುಕ್ತರ ಕಛೇರಿ, ನಿರ್ದೇಶಕರು(ಪ್ರಾಥಮಿಕ)<br>2. ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ ಧಾರವಾಡ<br>3. ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ ಕಲಬುರಗಿ.<br>4. ಸಹನಿರ್ದೇಶಕರು,ಬೆಂಗಳೂರು<br>5. ಸಹನಿರ್ದೇಶಕರು, ಮೈಸೂರು<br>6. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) |
| 19 | ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದವರಿಗೆ **ಘಟಕದೊಳಗಿನ ಕೋರಿಕೆ** ವರ್ಗಾವಣೆಗಳಿಗೆ **ಕೌನ್ಸಿಲಿಂಗ್** | 30/07/2019 ರಿಂದ 05/08/2019 | ಜಿಲ್ಲಾ ಉಪನಿರ್ದೇಶಕರು (ಆಡಳಿತ). |
| 20 | ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು / ಹಿರಿಯ ಮುಖ್ಯ ಶಿಕ್ಷಕರು/ ವಿಶೇಷ ಶಿಕ್ಷಕರ ವೃಂದದವರಿಗೆ **ಘಟಕದೊಳಗಿನ ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್** | 05/08/2019 ರಿಂದ 07/08/2019 | ಜಿಲ್ಲಾ ಉಪನಿರ್ದೇಶಕರು (ಆಡಳಿತ) |
| | ಕಡ್ಡಾಯ ವರ್ಗಾವಣೆ – ಮುಂದುವರೆದ ಕ್ರಮಗಳು | | |
| 21 | **ಕಡ್ಡಾಯ ವರ್ಗಾವಣೆ (ನಿಯಮ 21(4)** ರಂತೆ) – ವಿಶೇಷ ವರ್ಗೀಕರಣದ ಹುದ್ದೆಗಳಲ್ಲಿನ ಶಿಕ್ಷಕರ ಪ್ರಕರಣಗಳಲ್ಲಿ 5 ವರ್ಷದ ಅವಧಿ ಪೂರೈಸಿರುವ ಹಾಗೂ 3 ವರ್ಷದ ಅವಧಿ ಪೂರೈಸಿದ್ದು ಇಚ್ಛೆ ವ್ಯಕ್ತಪಡಿಸಿರುವವರ ಪ್ರಕರಣಗಳಲ್ಲಿ 'ಎ' ವಲಯದಲ್ಲಿ ಹತ್ತು ವರ್ಷಗಳ ನಿರಂತರ ಸೇವೆಯನ್ನು ಪೂರೈಸಿರುವ ಶಿಕ್ಷಕರನ್ನು ವಲಯ 'ಎ' ದಿಂದ ವಲಯ 'ಸಿ' ಗೆ | 08/08/2019 | ಜಿಲ್ಲಾ ಉಪನಿರ್ದೇಶಕರು |

| | | | |
|---|---|---|---|
| | ಕಡ್ಡಾಯ ವರ್ಗಾವಣೆ **ಕೌನ್ಸಿಲಿಂಗ್** (ಶೇಕಡ 20ಕ್ಕಿಂತ ಹೆಚ್ಚಿನ ಖಾಲಿ ಹುದ್ದೆ ಇರುವ ತಾಲ್ಲೂಕಿಗೆ ಆದ್ಯತೆ) | | |
| 22 | ಕಡ್ಡಾಯ ವರ್ಗಾವಣೆ – ಸೆಕ್ಷನ್ 3ಎ(1)(2) ರಂತೆ **ಕೌನ್ಸಿಲಿಂಗ್** | | |
| | 'ಎ' ವಲಯದ ಶಿಕ್ಷಕರನ್ನು 'ಬಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ (ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು)<br>'ಎ' ವಲಯದ ಶಿಕ್ಷಕರನ್ನು 'ಸಿ' ವಲಯಕ್ಕೆ ವರ್ಗಾವಣೆಗಾಗಿ ಕೌನ್ಸಿಲಿಂಗ್ – ಶೇ 20ಕ್ಕಿಂತಲೂ ಹೆಚ್ಚಿನ ಹುದ್ದೆಗಳು ಖಾಲಿ ಇರುವ ಘಟಕಕ್ಕೆ ಆದ್ಯತೆಯಲ್ಲಿ ವರ್ಗಾವಣೆಗೊಳಿಸುವುದು. | 08/08/2019 ರಿಂದ 09/08/2019 | ಜಿಲ್ಲಾ ಉಪನಿರ್ದೇಶಕರು |
| 23 | ಕೈಬಿಟ್ಟಿದೆ | | |
| | ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳು – ಮುಂದುವರೆದ ಕ್ರಮಗಳು | | |
| 24 | **ಪರಸ್ಪರ ವರ್ಗಾವಣೆಗೆ ಕೌನ್ಸಿಲಿಂಗ್** ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ **(ಘಟಕದ ಒಳಗೆ)** | 13/08/2019 | ಜಿಲ್ಲಾ ಉಪನಿರ್ದೇಶಕರು |
| 25 | ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದವರಿಗೆ **ಘಟಕದ ಹೊರಗಿನ ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್** | 14/08/2019 ರಿಂದ 24/08/2019 | **ವಿಭಾದೊಳಗಿನ ಅಂತರ್ ಜಿಲ್ಲಾ ವರ್ಗಾವಣೆಗಳು**– ವಿಭಾಗೀಯ ಸಹ ನಿರ್ದೇಶಕರು (ವಿಭಾಗದ ಕೇಂದ್ರ ಸ್ಥಳದಲ್ಲಿ)<br>**ಅಂತರ್ ವಿಭಾಗದ ವರ್ಗಾವಣೆಗಳು**– ವರ್ಗಾವಣಾ ಪ್ರಾಧಿಕಾರಿಯವರು ಆನ್–ಲೈನ್ ನಲ್ಲಿ ಅನುಮೋದಿಸಿರುವ ಪಟ್ಟಿಯನ್ನು ಆಧರಿಸಿ ವಿಭಾಗದ ಕೇಂದ್ರ ಸ್ಥಳದಲ್ಲಿಯೇ ವಿಭಾಗೀಯ ಸಹ ನಿರ್ದೇಶಕರು/ಅಪರ ಆಯುಕ್ತಾಲಯದ ಸಹನಿರ್ದೇಶಕರು ಅಂತರ್ ವಿಭಾಗೀಯ ವರ್ಗಾವಣೆಗಳನ್ನು ಸಹ ನಿರ್ವಹಿಸುವುದು ಮತ್ತು ಪ್ರಾಥಮಿಕ ಶಿಕ್ಷಣ ನಿರ್ದೇಶಕರು ಮೇಲುಸ್ತುವಾರಿ ಕಾರ್ಯವನ್ನು ಕೈಗೊಳ್ಳುವುದು. |
| 26 | ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದವರಿಗೆ ಘಟಕದ ಹೊರಗಿನ ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್(ವಿಶೇಷ ಶಿಕ್ಷಕರು) | 26/08/2019 ರಿಂದ 28/08/2019 | **ವಿಭಾದೊಳಗಿನ ಅಂತರ್ ಜಿಲ್ಲಾ ವರ್ಗಾವಣೆಗಳು**– ವಿಭಾಗೀಯ ಸಹ ನಿರ್ದೇಶಕರು (ವಿಭಾಗದ ಕೇಂದ್ರ ಸ್ಥಳದಲ್ಲಿ)<br>**ಅಂತರ್ ವಿಭಾಗದ ವರ್ಗಾವಣೆಗಳು**– ವರ್ಗಾವಣಾ ಪ್ರಾಧಿಕಾರಿಯವರು ಆನ್–ಲೈನ್ ನಲ್ಲಿ ಅನುಮೋದಿಸಿರುವ ಪಟ್ಟಿಯನ್ನು ಆಧರಿಸಿ ವಿಭಾಗದ ಕೇಂದ್ರ ಸ್ಥಳದಲ್ಲಿಯೇ ವಿಭಾಗೀಯ ಸಹ ನಿರ್ದೇಶಕರು/ಅಪರ ಆಯುಕ್ತಾಲಯದ ಸಹನಿರ್ದೇಶಕರು ಅಂತರ್ ವಿಭಾಗೀಯ ವರ್ಗಾವಣೆಗಳನ್ನು ಸಹ ನಿರ್ವಹಿಸುವುದು ಮತ್ತು ಪ್ರಾಥಮಿಕ ಶಿಕ್ಷಣ ನಿರ್ದೇಶಕರು ಮೇಲುಸ್ತುವಾರಿ ಕಾರ್ಯವನ್ನು ಕೈಗೊಳ್ಳುವುದು. |

| | | | |
|---|---|---|---|
| 27 | **ಪರಸ್ಪರ ವರ್ಗಾವಣೆಗೆ ಕೌನ್ಸಿಲಿಂಗ್‌ಗೆ** ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ **(ಘಟಕದ ಹೊರಗೆ)**<br>ಒಂದನೇ ಹಂತದಲ್ಲಿ – ವಿಭಾಗದ ಒಳಗೆ<br>ಎರಡನೇಯ ಹಂತದಲ್ಲಿ – ಅಂತರ್ ವಿಭಾಗ | 29/08/2019 ರಿಂದ 31/08/2019 | **ವಿಭಾಗದೊಳಗಿನ ಅಂತರ್ ಜಿಲ್ಲಾ ವರ್ಗಾವಣೆಗಳು**– ವಿಭಾಗೀಯ ಸಹ ನಿರ್ದೇಶಕರು (ವಿಭಾಗದ ಕೇಂದ್ರ ಸ್ಥಳದಲ್ಲಿ)<br>**ಅಂತರ್ ವಿಭಾಗದ ವರ್ಗಾವಣೆಗಳು**– ವರ್ಗಾವಣಾ ಪ್ರಾಧಿಕಾರಿಯವರು ಆನ್–ಲೈನ್ ನಲ್ಲಿ ಅನುಮೋದಿಸಿರುವ ಪಟ್ಟಿಯನ್ನು ಆಧರಿಸಿ ವಿಭಾಗದ ಕೇಂದ್ರ ಸ್ಥಳದಲ್ಲಿಯೇ ವಿಭಾಗೀಯ ಸಹ ನಿರ್ದೇಶಕರು/ಅಪರ ಆಯುಕ್ತಾಲಯದ ಸಹನಿರ್ದೇಶಕರು ಅಂತರ್ ವಿಭಾಗೀಯ ವರ್ಗಾವಣೆಗಳನ್ನು ಸಹ ನಿರ್ವಹಿಸುವುದು ಮತ್ತು ಪ್ರಾಥಮಿಕ ಶಿಕ್ಷಣ ನಿರ್ದೇಶಕರು ಮೇಲುಸ್ತುವಾರಿ ಕಾರ್ಯವನ್ನು ಕೈಗೊಳ್ಳುವುದು. |

**(ಡಾ॥ ಕೆ.ಜಿ.ಜಗದೀಶ, ಭಾ.ಆ.ಸೇ.,)**
**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

ಇವರಿಗೆ,

1) **ಸಹ ನಿರ್ದೇಶಕರು, ಬೆಂಗಳೂರು/ಮೈಸೂರು/ಅಪರ ಆಯುಕ್ತರ ಕಛೇರಿ ಕಲ್ಬುರ್ಗಿ/ಧಾರವಾಡ**
2) **ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ**
3) **ಕ್ಷೇತ್ರಶಿಕ್ಷಣಾಧಿಕಾರಿಯವರಿಗೆ (ಆಯಾ ಜಿಲ್ಲಾ ಉಪನಿರ್ದೇಶಕರ ಮುಖಾಂತರ)**

**ಪ್ರತಿಯನ್ನು:–**

1. ಸರ್ಕಾರದ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–1 ಇವರಿಗೆ ವಂದನಾ ಪೂರ್ವಕವಾಗಿ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
6. ಆಪ್ತ ಕಾರ್ಯದರ್ಶಿಯವರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ/ಧಾರವಾಡ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
9. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು
10. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು.
11. ಮುಖ್ಯಸ್ಥರು, ಇ–ಗೌರ್ನೆನ್ಸ್, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು–ಪ್ರಸಕ್ತ ವರ್ಗಾವಣೆಗಳಿಗೆ "ತಂತ್ರಾಂಶವನ್ನು" ಸಜ್ಜುಗೊಳಿಸಿ ಅಗತ್ಯ ತಾಂತ್ರಿಕ ಸಹಕಾರವನ್ನು ಒದಗಿಸಲು ಸಂಬಂಧಿತ ತಂಡವನ್ನು ನಿಯೋಜಿಸಲು ಮತ್ತು ವೇಳಾಪಟ್ಟಿಯಂತೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿದೆ.
12. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
13. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ
14. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಅಗತ್ಯ ಕ್ರಮಕ್ಕಾಗಿ
15. ಇಲಾಖಾ ವೆಬ್–ಸೈಟ್ನಲ್ಲಿ ಪ್ರಕಟಣೆಗೆ 16. ಕಛೇರಿ ಪ್ರತಿ